# ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

# KARNATAKA NEERAVARI NIGAM LTD.,
(A GOVERNMENT OF KARNATAKA ENTERPRISE)

ದೂರವಾಣಿ : 0836-2776925
ಫ್ಯಾಕ್ಸ್ : 0836-2776992, 0836-2776200
E-mail id : knnl.co.cao@gmail.com

ಕೇಂದ್ರ ಕಛೇರಿ
ವಿಜಯಾ ಕಾಂಪ್ಲೇಕ್ಸ್, ಶ್ರೀನಗರ ಕ್ರಾಸ್
ಹಳಿಯಾಳ ರಸ್ತೆ, ಧಾರವಾಡ-580003.


ಸಂಖ್ಯೆ: ಕೆಎನ್‌ಎನ್/ಮುಲೆಅ/ಜಿಎಸ್‌ಟಿ–03/2017–18/3298

ದಿನಾಂಕ: 05.09.2017

## ಸುತ್ತೋಲೆ

**ವಿಷಯ:** ದಿನಾಂಕ: 01.07.2017 ರಿಂದ ಜಾರಿಗೆ ಬಂದಿರುವಂತೆ, ಕೇಂದ್ರ ತೆರಿಗೆ (CGST) ಹಾಗೂ ರಾಜ್ಯ ತೆರಿಗೆ (SGST) ಗಳನ್ನು ಸರಕು ಖರೀದಿ ಸಂದರ್ಭದಲ್ಲಿ ಮೂಲದಲ್ಲಿ ಕಡಿತಗೊಳಿಸಿದ (ಕಾಮಗಾರಿ ಬಿಲ್ಲುಗಳು ಸೇರಿ) (Goods Purchase) ಮತ್ತು ನಿಗಮಕ್ಕೆ ಸೇವಾ ಪೂರೈಕೆದಾರರಿಗೆ (Service Providers to Nigam) ನಿಗಮದಿಂದ ಪಾವತಿಸಲಾದ ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ಮೊತ್ತದ ವಿವರಗಳನ್ನು ನಿಗಧಿತ ಅನುಬಂಧದಲ್ಲಿ ದೃಢೀಕರಿಸಿ ಪೂರೈಸುವ ಕುರಿತು.

**ಉಲ್ಲೇಖ:** 1. ಕರ್ನಾಟಕ ರಾಜ್ಯಪತ್ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 28 ಶಾಸನ 2017, ಬೆಂಗಳೂರು ದಿನಾಂಕ: 27.06.2017.

2. ಈ ಕಛೇರಿ ಪತ್ರ ಸಂಖ್ಯೆ: 1697 ದಿನಾಂಕ: 29.06.2017.

-----------

ಉಲ್ಲೇಖ 1 ರ ಅಧಿಸೂಚನೆಯಂತೆ, ದಿನಾಂಕ: 01.07.2017 ರಿಂದ ಜಾರಿಗೆ ಬಂದಿರುವಂತೆ, ಜಿಎಸ್‌ಟಿ (ಸರಕು ಹಾಗೂ ಸೇವಾ ತೆರಿಗೆ) ಜಾರಿಗೆ ಬಂದಿದ್ದು, ಇದರನ್ವಯ, ಕೇಂದ್ರ ಕಛೇರಿಗೆ ಕೇಂದ್ರಿಕೃತವಾಗಿ (Centralize Registration No.GSTIN 29AABCK6647B1ZK) ಪಡೆಯಲಾಗಿದ್ದು, ಹಣ ಸೆಳೆಯುವ ಹಾಗೂ ಬಟವಾಡೆ ಮಾಡುವ ಅಧಿಕಾರಿಗಳು ಸದರಿ ನೋಂದಣಿ ಜಿಎಸ್‌ಟಿಯಡಿಯಲ್ಲಿ ಮಾತ್ರ ವ್ಯವಹರಿಸುವುದು ಮತ್ತು ಈ ಕೆಳಗಿನ ಮಾರ್ಗಸೂಚಿಗಳನ್ನು ನೀಡಲಾಗಿದೆ:

1. ನಿಗಮಕ್ಕೆ ಸರಕು ಪೂರೈಕೆದಾರರು (ಕಾಮಗಾರಿಗಳು ಸೇರಿ) ಜಿಎಸ್‌ಟಿಎನ್ ಸಂಖ್ಯೆಯನ್ನು ಕಡ್ಡಾಯವಾಗಿ ಹೊಂದಿರುವ ಕುರಿತು ಖಚಿತಪಡಿಸಿಕೊಂಡ ನಂತರವೇ ಸರಕು ಹಾಗೂ ಸೇವೆಯನ್ನು ಗುತ್ತಿಗೆದಾರರಿಂದ ಪಡೆಯುವುದು. ಜಿಎಸ್‌ಟಿ ನೋಂದಾಯಿತರಲ್ಲದ ಕಾಮಗಾರಿ ಗುತ್ತಿಗೆದಾರರಿಂದ / ಸೇವಾ ಪೂರೈಕೆದಾರರಿಂದ ಸರಕುಗಳನ್ನು (ಕಾಮಗಾರಿಗಳು ಸೇರಿ) ಮತ್ತು ಸೇವೆಗಳನ್ನು ಪಡೆದಲ್ಲಿ ಸಂಬಂಧಪಟ್ಟ ಹಣ ಸೆಳೆಯುವ ಹಾಗೂ ಬಟವಾಡೆ ಮಾಡುವ ಅಧಿಕಾರಿಗಳೇ ನೇರವಾಗಿ ಹೊಣೆಗಾರರಾಗುವರು.
2. ಹಣ ಸೆಳೆಯುವ ಹಾಗೂ ಬಟವಾಡೆ ಮಾಡುವ ಅಧಿಕಾರಿಗಳು ಬಿಲ್ಲುಗಳ ಪಾವತಿ ಸಂದರ್ಭದಲ್ಲಿ (ಕಾಮಗಾರಿಗಳು) ಮೂಲದಲ್ಲಿ ಕಡಿತಗೊಳಿಸಲಾದ ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿಗಳನ್ನು ನೇರವಾಗಿ ಮೇಲೆ ತಿಳಿಸಲಾದ GSTIN No.29AABCK6647B1ZK ರಲ್ಲಿ ಆನ್‌ಲೈನ್ ಮುಖಾಂತರ ಪಾವತಿಸಿ, ವಿವರಗಳನ್ನು ನಿಗದಿತ ನಮೂನೆ (ಅನುಬಂಧ–1) ರಲ್ಲಿ ಪ್ರತಿ ತಿಂಗಳ 3ನೇ ತಾರೀಖಿನೊಳಗಾಗಿ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು. ಪಾವತಿ ವಿವರಗಳು ಮತ್ತು ಕಡಿತಗೊಳಿಸಲಾದ ಜಿಎಸ್‌ಟಿ ವಿವರಗಳನ್ನು ತಪ್ಪಿಲ್ಲದಂತೆ ಪರಿಶೀಲಿಸಿ, ಸಂಬಂಧಿಸಿದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಧೃಡೀಕರಿಸತಕ್ಕದ್ದು. ಅನುಬಂಧ–1ರಲ್ಲಿ ಮುಖ್ಯವಾಗಿ ಕಾಮಗಾರಿಗಳಿಗೆ ಸಂಬಂಧಿಸಿದ ಬಿಲ್ಲುಗಳು ಒಳಗೊಂಡಿರುತ್ತದೆ. ನಿಗಧಿತ ಅನುಬಂಧದಲ್ಲಿ ಗುತ್ತಿಗೆದಾರರಿಗೆ ಬಿಲ್ಲುಗಳನ್ನು ಪಾವತಿಸಿದ ಕೂಡಲೇ ನಿಗದಿತ ಅನುಬಂಧಗಳನ್ನು ಪ್ರತಿ ದಿನ ವೋಚರ್ ನಂಬರ್‌ಗಳೊಂದಿಗೆ ದಾಖಲಿಸುವುದು.

*A Concern for Water*



ನೊಂದಾಯಿತ ಕಛೇರಿ: ಕರ್ನಾಟಕ ನೀರಾವರಿ ನಿಗಮ ನಿಯಮಿತ, 4ನೇ ಮಹಡಿ, ಕಾಫಿ ಬೋರ್ಡ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ ಬೆಂಗಳೂರು-560001. ದೂರವಾಣಿ: 080-22283074-78, ಫ್ಯಾಕ್ಸ್: 080-22386015. ಈ ಮೇಲ್ knnl@knnlindia.com
website: www.knnlindia.com, CIN-U85110KA1998SGC024503

3. ಸೇವಾ ಪೂರೈಕೆದಾರರಿಗೆ (Service Providers) ಸಂಬಂಧಿಸಿದಂತೆ ನಿಗಮದಿಂದ ಪೂರೈಕೆದಾರರಿಗೆ ಪಾವತಿಸಲಾದ ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧ-2ರಲ್ಲಿ ಪ್ರತಿ ತಿಂಗಳ 3ನೇ ತಾರೀಖಿನೊಳಗಾಗಿ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು. ಈ ಅನುಬಂಧವನ್ನು ಸಂಬಂಧಿಸಿದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ದೃಢೀಕರಿಸತಕ್ಕದ್ದು. ಅನುಬಂಧ-2, 3 , 4, 5, 6 ಮತ್ತು 7ರಲ್ಲಿ ಕಛೇರಿ ಸರಕು ಖರೀದಿ, ವಾಹನ ಬಾಡಿಗೆ, ಕಟ್ಟಡ ಬಾಡಿಗೆ, ವಕೀಲರ ವೃತ್ತಿ ಸಂಭಾವನೆ, ಹೊರಗುತ್ತಿಗೆ ಕಂಪ್ಯೂಟರ್ ಆಪರೇಟರ್, ಗ್ರೂಪ್-ಡಿ ಸಿಬ್ಬಂದಿ, ವಾಹನ ಚಾಲಕರು, ಟೆಲಿಫೋನ್ ಬಿಲ್ಲುಗಳು, ಎಂಸಿಎ ಪಾವತಿ ಮುಂತಾದವು ಒಳಗೊಂಡಿರುತ್ತದೆ. ನಿಗಧಿತ ಅನುಬಂಧದಲ್ಲಿ ಗುತ್ತಿಗೆದಾರರಿಗೆ ಬಿಲ್ಲುಗಳನ್ನು ಪಾವತಿಸಿದ ಕೂಡಲೇ ನಿಗಧಿತ ಅನುಬಂಧಗಳನ್ನು ಪ್ರತಿ ದಿನ ವೋಚರ್ ನಂಬರ್‌ಗಳೊಂದಿಗೆ ಪೂರ್ಣಗೊಳಿಸುವುದು. ಅನ್‌ಲೈನ್ ಮುಖಾಂತರ ವಕೀಲರ ಶುಲ್ಕದ ಬಾಬ್ತು ಜಿಎಸ್‌ಟಿ ಪಾವತಿಸಿ ಚಲನ್ ನಂಬರ್ ಮತ್ತು ದಿನಾಂಕವನ್ನು ಪ್ರತಿ ದಿನ ದಾಖಲಿಸುವುದು.

4. ಹಣ ಭರವಸೆ ಬೇಡಿಕೆ ಸಲ್ಲಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಮೇಲುರುಜು ಆಗಿರುವ ಬಿಲ್ಲುಗಳಿಗೆ ಮಾತ್ರ ಅನುದಾನದ ಬೇಡಿಕೆಯನ್ನು ಸಲ್ಲಿಸುವುದು.

5. ಬಿಡುಗಡೆ ಮಾಡಲಾಗುವ ಅನುದಾನವನ್ನು ಸಂಬಂಧಿತ ಲೆಕ್ಕ ಶೀರ್ಷಿಕೆಯಡಿಯಲ್ಲಿಯೇ ವೆಚ್ಚಭರಿಸತಕ್ಕದ್ದು. ಇಲ್ಲವಾದಲ್ಲಿ ಸಂಬಂಧಿತ ಲೆಕ್ಕಾಧೀಕ್ಷಕರು / ಲೆಕ್ಕಪರಿಶೋಧನಾಧಿಕಾರಿಗಳು / ವಿಷಯ ನಿರ್ವಾಹಕರು ನೇರವಾಗಿ ಜವಾಬ್ದಾರಾಗುವರು ಈ ಮಾರ್ಗಸೂಚಿಯ ಉಲ್ಲಂಘನೆಯಾದಲ್ಲಿ ಸಂಬಂಧಿತರ ಮೇಲೆ ಕ್ರಮ ಜರುಗಿಸಲಾಗುವುದು.

ಕಾಮಗಾರಿ ಬಿಲ್ಲುಗಳ ಪಾವತಿ ಸಂದರ್ಭದಲ್ಲಿ ಮೂಲದಲ್ಲಿ ಕಡಿತಗೊಳಿಸಬೇಕಾದ ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ವಿವರಗಳನ್ನು ಮತ್ತು ನಿಗಮದಿಂದ ಸೇವಾ ಸೌಲಭ್ಯಗಳ ಪೂರೈಕೆದಾರರಿಗೆ ಪಾವತಿಸಬೇಕಾದ ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ವಿವರದ ಪ್ರತಿಗಳನ್ನು ಈ ಸುತ್ತೋಲೆಗೆ ಲಗತ್ತಿಸಲಾಗಿದೆ (ಅನುಬಂಧ-9, 10 ಮತ್ತು 11).

ಸಹಿ/-

(ಎ ಎನ್ ರಾಮ್‌ದಾಸ್)

ಕೆ.ಎಸ್.ಎ.ಎಸ್.

ಮುಖ್ಯ ಲೆಕ್ಕಾಧಿಕಾರಿಗಳು

ಪ್ರತಿಯನ್ನು ಕೆಳಕಂಡವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:-

1. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ನಂ.1, ಕಾಫಿ ಬೋರ್ಡ್ ಕಟ್ಟಡ, ಡಾ: ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001.
2. ಕಂಪನಿ ಕಾರ್ಯದರ್ಶಿಗಳು, ಕನೀನಿನಿ, ನಂ.1, ಕಾಫಿ ಬೋರ್ಡ್ ಕಟ್ಟಡ, ಡಾ: ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001
3. ಪ್ರಧಾನ ವ್ಯವಸ್ಥಾಪಕರು (ಹಣಕಾಸು), ಕನೀನಿನಿ, ನಂ.1, ಕಾಫಿ ಬೋರ್ಡ್ ಕಟ್ಟಡ, ಡಾ: ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001.
4. ಮುಖ್ಯ ಆಡಳಿತಾಧಿಕಾರಿಗಳು, ಕನೀನಿನಿ, ಕೇಂದ್ರ ಕಛೇರಿ, ಶ್ರೀನಗರ ಕ್ರಾಸ್ ಹಳಿಯಾಳ ರಸ್ತೆ, ಧಾರವಾಡ - 580 003.

**ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ:-**

1. ಎಲ್ಲಾ ಮುಖ್ಯ ಇಂಜಿನಿಯರ್‌ಗಳು, ಕರ್ನಾಟಕ ನೀರಾವರಿ ನಿಗಮ ನಿಯಮಿತ
2. ಎಲ್ಲಾ ಅಧೀಕ್ಷಕ ಇಂಜಿನಿಯರ್‌ಗಳು, ಕರ್ನಾಟಕ ನೀರಾವರಿ ನಿಗಮ ನಿಯಮಿತ
3. ಎಲ್ಲಾ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ

1. ಪ್ರತಿಯನ್ನು ಕೇಂದ್ರ ಕಛೇರಿಯ ಎಲ್ಲಾ ಲೆಕ್ಕಪರಿಶೋಧನಾಧಿಕಾರಿಗಳು / ಲೆಕ್ಕಾಧೀಕ್ಷಕರು / ವಿಷಯ ನಿರ್ವಹಕರ ಮಾಹಿತಿಗಾಗಿ ರವಾನಿಸುತ್ತಾ, ಪ್ರತಿ ತಿಂಗಳು 3ನೇ ತಾರೀಖಿನಂದು ತಪ್ಪದೇ ವಿಭಾಗೀಯ ಕಛೇರಿಯಿಂದ ಸೂಚಿಸಲಾದ ಜಿಎಸ್‌ಟಿ ನಮೂನೆಯಲ್ಲಿ ವಿವರಗಳನ್ನು ಪಡೆದು ಪರಿಶೀಲಿಸಿ, ತಮ್ಮ ದೃಢೀಕರಣದೊಂದಿಗೆ ನಿಗದಿತ ನಮೂನೆಯಲ್ಲಿ ಜಿಎಸ್‌ಟಿ ವಿಷಯ ನಿರ್ವಹಕರಿಗೆ ಮಾಹಿತಿಯನ್ನು ಒದಗಿಸುವುದು.
2. ಪ್ರತಿಯನ್ನು ಕೇಂದ್ರ ಕಛೇರಿಯ ಆಡಳಿತ ಶಾಖೆಯ ಸಂಬಂಧಿಸಿದ ವಿಷಯ ನಿರ್ವಹಕರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

5/9/2017

(ಎ ಎನ್ ರಾಮ್‌ದಾಸ್)

ಕೆ.ಎಸ್.ಎ.ಎಸ್.

**ಮುಖ್ಯ ಲೆಕ್ಕಾಧಿಕಾರಿಗಳು**